ಕರ್ನಾಟಕ ಸರ್ಕಾರ

Government of Karnataka

# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು.

# Raichur Institute Of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)

ಹೈದ್ರಾಬಾದ್ ರೋಡ್, ರಾಯಚೂರು -584102 Hydrabad Road, Raichur -584102

Web. www. rims-raichur.com Phone /Fax-08532-238488/89 Email : info@rims-raichur.com

ಸಂ. ರಿಮ್ಸ್ / ಸಾಮಾನ್ಯ / ವಿ.ವ - 91 / 2020-21 ದಿನಾಂಕ : 22.06.2022

## ಅಧಿಸೂಚನೆ

ವಿಷಯ :- ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಅನುಪಯುಕ್ತ ಕಬ್ಬಿಣ, ಸ್ಟೀಲ್, ಕಟ್ಟಿಗೆ, ಪ್ಲಾಸ್ಟಿಕ್, ಎಲೆಕ್ಟ್ರೀಕಲ್ ವಸ್ತುಗಳು ಹಾಗು ಬ್ಯಾಟರಿಗಳನ್ನು ನಿರುಪಯುಕ್ತಗೊಳಿಸುವ ಸಂಬಂಧ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ಆಹ್ವಾನಿಸಿರುವ ಬಗ್ಗೆ.

*****

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಅನುಪಯುಕ್ತ ಕಬ್ಬಿಣ, ಸ್ಟೀಲ್, ಕಟ್ಟಿಗೆ, ಪ್ಲಾಸ್ಟಿಕ್, ಎಲೆಕ್ಟ್ರೀಕಲ್ ವಸ್ತುಗಳು ಹಾಗು ಬ್ಯಾಟರಿಗಳನ್ನು ನಿರುಪಯುಕ್ತಗೊಳಿಸುವ ಸಂಬಂಧ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳವಂತಹವರು ಈ ಕೆಳಕಾಣಿಸಿದ ಷರತ್ತಿಗೊಳಪಟ್ಟು ಖುದ್ದಾಗಿ ಸ್ಥಳವನ್ನು ಪರಿಶೀಲನೆ ಮಾಡಿಕೊಂಡು ತಮ್ಮ ದರಗಳನ್ನು ಮುಚ್ಚಿದ ಲಕೋಟೆಯಲ್ಲಿ (Sealed Cover) ಜಿಎಸ್‌ಟಿ, ಪ್ಯಾನ್ ಕಾರ್ಡ್ ಮತ್ತು ಸ್ಥಳಿಯ ನೊಂದಣಿದಾರರ ಪ್ರಮಾಣ ಪತ್ರಗಳ ದಾಖಲೆಗಳೊಂದಿಗೆ ರಿಮ್ಸ್ ಕಾರ್ಯಾಲಯಕ್ಕೆ ದಿನಾಂಕ 07.07.2022 ರ ಸಾಯಂಕಾಲ 5.30 ಗಂಟೆಯೊಳಗಾಗಿ ಸಲ್ಲಿಸಲು ಕೋರಲಾಗಿದೆ.

| ಕ್ರಮ ಸಂಖ್ಯೆ | ವಿವರ |
|---|---|
| 1 | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಅನುಪಯುಕ್ತ ಕಬ್ಬಿಣ, ಸ್ಟೀಲ್, ಕಟ್ಟಿಗೆ, ಪ್ಲಾಸ್ಟಿಕ್, ಎಲೆಕ್ಟ್ರೀಕಲ್ ವಸ್ತುಗಳು ಹಾಗು ಬ್ಯಾಟರಿಗಳನ್ನು ನಿರುಪಯುಕ್ತಗೊಳಿಸುವ ಬಗ್ಗೆ |

ನಿಬಂಧನೆಗಳು :-

1. ಬಿಡ್‌ದಾರರು ತಮ್ಮದೇ ಆದ ದರಪಟ್ಟಿಯನ್ನು ಅದಕ್ಕೆ ತಗುಲುವ ದರದೊಂದಿಗೆ ನಮೂದಿಸತಕ್ಕದ್ದು.
2. ಬಿಡ್‌ದಾರರು ರೂ. 500/- ಗಳ (Non Refund) ಡಿಡಿ ಯನ್ನು ನಿರ್ದೇಶಕರು, ರಿಮ್ಸ್, ರಾಯಚೂರು ಇವರ ಹೆಸರಿನಲ್ಲಿ ಸಿದ್ಧಪಡಿಸಿಕೊಂಡು ರಿಮ್ಸ್ ಆಡಳಿತ ಕಚೇರಿಯಲ್ಲಿ ನಿಗದಿತ ಅವಧಿಯಲ್ಲಿ ನೊಂದಣಿ ಮಾಡಕೊಳ್ಳತಕ್ಕದ್ದು.
3. ಸದರಿ ದರಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಮತ್ತು ಅಂಗೀಕರಿಸುವ ಹಕ್ಕನ್ನು ನಿರ್ದೇಶಕರು ಇವರಿಗೆ ಕಾಯ್ದಿರಿಸಲಾಗಿದೆ.
4. ಜಿಎಸ್‌ಟಿ ನೊಂದಣಿ ಹೊಂದಿರುವ ಬಿಡ್‌ದಾರರು ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.
5. ಅನುಪಯುಕ್ತ ಕಬ್ಬಿಣ, ಸ್ಟೀಲ್, ಕಟ್ಟಿಗೆ, ಪ್ಲಾಸ್ಟಿಕ್, ಎಲೆಕ್ಟ್ರೀಕಲ್ ವಸ್ತುಗಳು ಹಾಗು ಬ್ಯಾಟರಿಗಳ ದರವನ್ನು ಪ್ರತ್ಯೇಕವಾಗಿ ತಾವು ಪ್ರತಿ ಕೆಜಿಗೆ ನಮೂದಿಸಿ ಸಲ್ಲಿಸಬೇಕು.
6. ಸದರಿ ಅನುಪಯುಕ್ತ ಕಬ್ಬಿಣ, ಸ್ಟೀಲ್, ಕಟ್ಟಿಗೆ, ಪ್ಲಾಸ್ಟಿಕ್, ಎಲೆಕ್ಟ್ರೀಕಲ್ ವಸ್ತುಗಳು ಹಾಗು ಬ್ಯಾಟರಿಗಳನ್ನು Weigh Bridge ನಲ್ಲಿ ತೂಕ ಮಾಡಿದ ನಂತರ ಒಟ್ಟು ತೂಕಕ್ಕೆ ತಾವು ನಮೂದಿಸಿದ ದರವನ್ನು ಗುಣಿಸಿ ಒಟ್ಟು ಮೊತ್ತವನ್ನು ಪರಿಗಣಿಸಲಾಗುವುದು.
7. ಸದರಿ ವಸ್ತುಗಳ ಖರೀದಿಯು ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಮತ್ತು ನಿಯಮ 2000 ಗಳಿಗೆ ಒಳಪಟ್ಟಿರುತ್ತದೆ.
8. ಆಸಕ್ತಿಯುಳ್ಳ ಬಿಡ್‌ದಾರರು ತಮ್ಮ ದರಪಟ್ಟಿಗಳನ್ನು ದಿನಾಂಕ 07.07.2022 ರೊಳಗಾಗಿ ಅಂಚೆ ಮುಖಾಂತರ ಅಥವಾ ಖುದ್ದಾಗಿ ರಿಮ್ಸ್ ಸ್ವೀಕೃತ ವಿಭಾಗದಲ್ಲಿ ಸಲ್ಲಿಸತಕ್ಕದ್ದು.
9. H1 ಬಿಡ್‌ದಾರರು ಸ್ಥಳದಲ್ಲಿಯೇ ಒಟ್ಟು ತೂಕದ ಮೊತ್ತವನ್ನು ನಗದು ರೂಪದಲ್ಲಾಗಲಿ ಅಥವಾ ಡಿಡಿ ಮುಖಾಂತರವಾಗಲಿ ಸಲ್ಲಿಸಿದ ನಂತರವೇ, ಅನುಪಯುಕ್ತ ವಸ್ತುಗಳನ್ನು ತೆಗೆದುಕೊಂಡು ಹೋಗಲು ಅನುಮತಿಸಲಾಗುವುದು.
10. ರಿಮ್ಸ್ ಕಾರ್ಯಲಯಕ್ಕೆ ಸ್ವೀಕೃತವಾಗುವ ಸೀಲ್ಡ್ ಲಕೋಟೆಗಳನ್ನು ದಿನಾಂಕ 11.07.2022 ರಂದು ಅನುಪಯುಕ್ತ ವಸ್ತುಗಳ ವಿಲೇವಾರಿ ಸಮಿತಿ ಸಮ್ಮುಖದಲ್ಲಿ ತರೆಯಲಾಗುವುದು.
11. ದರಪಟ್ಟಿ ಮೌಲ್ಯಮಾಪನಾ ಮಾಡಿ ಅತಿ ಹೆಚ್ಚಿನ ದರ ಸೂಚಿಸಿರುವ ಬಿಡ್‌ದಾರರಿಗೆ ಮಾತ್ರ ಆದೇಶವನ್ನು ನೀಡಲಾಗುವುದು.
12. ಅನುಪಯುಕ್ತ ವಸ್ತುಗಳ ವಿಲೇವಾರಿ ಸಮಿತಿ ಸಭೆಯು ಕೈಗೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ.
13. ಅನಿವಾರ್ಯ ಕಾರಣಗಳಿಂದ ಸರ್ಕಾರಿ ರಜಾ ಘೋಷಿಸಿದಲ್ಲಿ ಕಡೆಯ ದಿನಾಂಕದ ಮುಂದಿನ ಸರ್ಕಾರಿ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.

ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು